**ದಿನಾಂಕಃ 06.08.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಕೆ ಎಸ್ ಆರ್ ವಕೀಲರಿಂದಃ-**

ದಾವಾ ಆಸ್ತಿಯು ಖುಷ್ಕಿ ಜಮೀನು ಎಂದರೆ ಸರಿ. ಅದರ ವಿಸ್ತೀರ್ಣ 2 ಎಕರೆ 5 ಗುಂಟೆ ಆಗಿರುತ್ತದೆ. ಸರ್ವೆ ನಂ 21ಃ4 ರಲ್ಲಿ ನೀರಾವರಿ ಸೌಲಭ್ಯ ಇಲ್ಲಾ ಎಂದರೆ ಸರಿ. ದಾವಾ ಆಸ್ತಿಯನ್ನು ನೀವು ಇತ್ತೀಚೆಗೆ ಯಾವಾಗ ನೋಡಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ದಾವಾ ಆಸ್ತಿಯನ್ನು ನೋಡಿರುತ್ತೇನೆ, ದಾವಾ ಆಸ್ತಿಯು ಪಾಳು ಬಿದ್ದಿರುತ್ತದೆ ಎಂದರೆ ಸರಿ. ಸಾಕ್ಷಿಗೆ 3 ಛಾಯಾಚಿತ್ರಗಳನ್ನು ತೋರಿಸಲಾಗಿ ಅವುಗಳಲ್ಲಿ ಯಾವುದೇ ಬೆಳೆದಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ 3 ಛಾಯಾಚಿತ್ರಗಳನ್ನು ನಿಡಿ-1 ರಿಂದ 3 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಛಾಯಾಚಿತ್ರವನ್ನು ತೋರಿಸಲಾಗಿ ಅದರಲ್ಲಿರುವ ತೆಂಗಿನ ತೋಟವು ಯಾರಿಗೆ ಸೇರಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಕಾನನಹಳ್ಳಿ ರಂಗಣ್ಣ ನವರಿಗೆ ಸೇರಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಛಾಯಾಚಿತ್ರವನ್ನು

ನಿಡಿ-4 ಎಂದು ಗುರುತಿಸಲಾಯಿತು. ನಮಗೆ ಸೇರಿದ ದಾವಾ ಆಸ್ತಿಯು ಬೇಸಾಯ ಮಾಡದೇ ಪಾಳು ಬಿದ್ದಿರುತ್ತದೆ ಎಂದರೆ ಸರಿ.

ನಮ್ಮ ಜಮೀನಿನ ಉತ್ತರ ದಿಕ್ಕಿಗೆ ಪ್ರತಿವಾದಿಯ ಆಸ್ತಿ ಇರುತ್ತದೆ. ಅವರ ಸರ್ವೆ ನಂ 21ಃ3 ಎಂದರೆ ಸರಿ. ಅವರು ಜಮೀನಿನಲ್ಲಿ ಬೇಸಾಯ ಮಾಡಿ ರಾಗಿ ಬಿತ್ತಿರುತ್ತಾರೆ ಎಂದರೆ ಸರಿ.

ಪ್ರಶ್ನೆಃ ನೀವು ನಿಮ್ಮ ಜಮೀನನ್ನು ಏಕೆ ಬೇಸಾಯ ಮಾಡುತ್ತಿರುವುದಿಲ್ಲ.

ಉತ್ತರಃ ಪ್ರತಿವಾದಿಗಳು ನನಗೆ ತಕರಾರು ಮಾಡಿರುವ ಕಾರಣ ನಾನು ಜಮೀನಿನ ಕಡೆ ಹೋಗಿರುವುದಿಲ್ಲ.

ನಾನು ದಾವಾ ಆಸ್ತಿಗೆ ಹೋಗದೇ 4 ವರ್ಷವಾಗಿರುತ್ತದೆ. ಪ್ರತಿವಾದಿಗಳು ನನ್ನ ಸ್ವಾದೀನಕ್ಕೆ ಧಕ್ಕೆ ಪಡಿಸಿದ್ದಕ್ಕೆ ನಾನು ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನ್ಯಾಯಾಲಯದಲ್ಲಿರುವ ದಾಖಲೆಗಳನ್ನು ತೋರಿಸಲಾಗಿ ಇವುಗಳಲ್ಲಿ ನೀವು ನೀಡಿರುವ ದೂರು ಯಾವುದು ತೋರಿಸಿ ಎಂಬ ಪ್ರಶ್ನೆಗೆ ಸಾಕ್ಷಿಯು ದೂರನ್ನು ತೋರಿಸಿರುವುದಿಲ್ಲ. ಪ್ರತಿವಾದಿಗಳು ನಮಗೆ ಯಾವುದೇ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ಆ ರೀತಿ ತೊಂದರೆ ನೀಡಿದ್ದ ಪಕ್ಷದಲ್ಲಿ ನಾನು ದೂರನ್ನು ಸಲ್ಲಿಸುತ್ತಿದ್ದೆ, ಅವರು ತೊಂದರೆ ನೀಡದೇ ಇರುವ ಕಾರಣ ನಾನು ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ದಿಃ 10.12.2018 ರಂದು ನನ್ನನ್ನು ಪ್ರತಿವಾದಿಯು ದಾವಾ ಆಸ್ತಿಯಿಂದ ಬಲವಂತದಿಂದ ಹೊರಹಾಕಿರುವ ಬಗ್ಗೆ ನ್ಯಾಯಾಲಯಕ್ಕೆ ಏನು ದಾಖಲೆ ಸಲ್ಲಿಸಿರುತ್ತೀರಿ ಎಂದರೆ ಸರ್ವೆ ಸ್ಕೆಚ್ ಮತ್ತು ಇತರೇ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯನ್ನು ಸರ್ವೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಆಸ್ತಿಯನ್ನು ಸರ್ವೆ ಮಾಡುವಾಗ ನನಗೂ ಸಹ ನೋಟಿಸು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈಗ ದಾವಾ ಆಸ್ತಿಯಲ್ಲಿ ಯಾರೂ ಬೇಸಾಯ ಮಾಡುತ್ತಿಲ್ಲ ಎಂದರೆ ಸರಿ. ಬಿಸ್ಲೇರೆ ಗ್ರಾಮದಲ್ಲಿ ನಮ್ಮ ಮನೆ ಇಲ್ಲಾ ಎಂದರೆ ಸರಿಯಲ್ಲ. ಬಿಸ್ಲೇರೆ ಗ್ರಾಮದಲ್ಲಿ ನಾನು ವಾಸವಾಗಿರುವ ಬಗ್ಗೆ ಮತ್ತು ನಮ್ಮ ಮನೆ ಇರುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. 4 ವರ್ಷಗಳಿಂದ ದಾವಾ ಆಸ್ತಿಯ ಬಳಿ ಹೋಗಿರುವುದಿಲ್ಲ ಎಂದರೆ ಸರಿ. ಅಸಲು ದಾವಾ ಸಂಖ್ಯೆ 352ಃ1996 ರ ತೀರ್ಪು ಮತ್ತು ಡಿಕ್ರಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಅಮಲ್ಜಾರಿ ಸಂಖ್ಯೆ 7ಃ2014 ರ ದಾಖಲೆಗಳನ್ನೂ ಸಹ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಅಮಲ್ಜಾರಿ ಸಂಖ್ಯೆ 7ಃ2014 ರ ವಜಾ ಆಯಿತು ಎಂದರೆ ಗೊತ್ತಿಲ್ಲ.

ತಿಮ್ಮಣ್ಣ ಬಿನ್ ಅಕ್ಕಿರಂಗಣ್ಣ ನವರಿಗೆ 3 ಜನ ಮಕ್ಕಳು ಇರುತ್ತಾರೆ. ಅವರುಗಳೆಂದರೆ ಮೂಡ್ಲಗಿರಿಯಪ್ಪ, ಗುಡದಪ್ಪ ಮತ್ತು ತೇಜಪ್ಪ. ದಾವಾ ಆಸ್ತಿಯು ಮೂಲತಃ ತಿಮ್ಮಣ್ಣ ಬಿನ್ ಅಕ್ಕಿರಂಗಣ್ಣ ನವರಿಗೆ ಸೇರಿದ ಜಮೀನು. ಸದರಿ ತಿಮ್ಮಣ್ಣ ಬಿನ್ ಅಕ್ಕಿರಂಗಣ್ಣ ನವರಿಗೆ ಜಮೀನು ಮೂಲತಃ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಯವರಿಗೆ ತಿಮ್ಮಣ್ಣ ರವರಿಂದ ದಾವಾ

ಆಸ್ತಿಯ ಖಾತೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಕಡೂರು ಸಬ್ ರಿಜಿಸ್ಟರ್ ವ್ಯಾಪ್ತಿಗೆ ಒಳಪಟ್ಟಿದ್ದರೂ ಸಹ ನೀವು ಏಕೆ ತರೀಕೆರೆ ಸಬ್ ರಿಜಿಸ್ಟರ್ ನಲ್ಲಿ ನೋಂದಣಿ ಮಾಡಿಸಿರುತ್ತೀರಿ ಎಂದರೆ ಸಾಕ್ಷಿಯು ನಮ್ಮ ತಾಯಿಗೆ ಬರಲು ಸಾಧ್ಯವಾಗದ ಕಾರಣ ಅಲ್ಲಿ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ತಾಯಿ ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ಈ ದಾವೆಗೆ ಏನು ತಕರಾರು ಹಾಕಿರುತ್ತಾರೆ ಎಂಬ ಬಗ್ಗೆ ನನಗೆ ತಿಳಿದಿರುವುದಿಲ್ಲ. ಈ ಬಗ್ಗೆ ನಾನು ವಕೀಲರಲ್ಲಿ ಕೇಳಿರುತ್ತೇನೆ. ಪ್ರತಿವಾದಿಗಳು ನನ್ನ ಸ್ವಾದೀನಕ್ಕೆ ಭಂಗಪಡಿಸಿ ನನ್ನನ್ನು ದಾವಾ ಆಸ್ತಿಯಿಂದ ಹೊರ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅವರ ಸ್ವತ್ತಿನಲ್ಲಿ ಮಾತ್ರ ಬೇಸಾಯ ಮಾಡುತ್ತಿದ್ದು ನಮ್ಮ ಜಮೀನಿನಲ್ಲಿ ಬೇಸಾಯ ಮಾಡುತ್ತಿಲ್ಲ ಎಂದರೆ ಸರಿ. ಸರ್ವೆ ನಂ 21 ರಲ್ಲಿ ಸುಮಾರು 7 ಪಹಣಿಗಳು ಇರುತ್ತವೆ. ಸರ್ವೆ ನಂ 21 ಎಷ್ಟು ಪೋಡುಗಳಾಗಿ ವಿಂಗಡಣೆಯಾಗಿರುತ್ತದೆ ಎಂದರೆ ಸಾಕ್ಷಿಯು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಈಗ ನನಗೆ ಹೇಳಲು ಆಗುವುದಿಲ್ಲ. 1 ನೇ ಪ್ರತಿವಾದಿ ನನ್ನ ಸಂಬಂಧಿಕ. ಅಕ್ಕಿರಂಗಣ್ಣನವರಿಗೆ ಒಟ್ಟು 6 ಜನ ಮಕ್ಕಳು. ಅವರುಗಳೆಂದರೆ ರಂಗಸ್ವಾಮಿ, ತಿಮ್ಮಣ್ಣ, ಮುದ್ದರಂಗಪ್ಪ, ಗುಡದಪ್ಪ, ಹಾಲಪ್ಪಜ್ಜ, ಗಿರಿಯಣ್ಣ ಆಗಿರುತ್ತಾರೆ.

1 ನೇ ಪ್ರತಿವಾದಿಯ ತಾಯಿಯ ಹೆಸರು ಅಕ್ಕಮಕ್ಕ ಎಂದರೆ ಸರಿ. ಸರ್ವೆ ನಂ 21 ರಲ್ಲಿ ಎಷ್ಟು ಎಕರೆ ಜಮೀನು ಇರುತ್ತದೆ ಎಂದರೆ ಸುಮಾರು 9 ಚಿಲ್ಲರೆ ಎಕರೆ ಇರಬಹುದು. ದಾವಾ ಆಸ್ತಿಯು ಪೂರ್ವ ಪಶ್ಚಿಮವಾಗಿರುತ್ತದೆ. ದಾವಾ ಆಸ್ತಿಯು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅವರ ಆಸ್ತಿಯನ್ನು ವಿಭಾಗ ಮಾಡಿಕೊಂಡು ಬೇರೆ ಬೇರೆ ಹಿಸ್ಸೆ ಹೊಂದಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಸಂಬಂಧದಲ್ಲಿ ಮಾವನಾಗಬೇಕು. ಸರ್ವೆ ನಂ 21:3 ಮತ್ತು 21:4 ಒಂದಕ್ಕೊಂದು ಲಗತ್ತಾಗಿರುತ್ತದೆ ಎಂದರೆ ಸರಿಯಲ್ಲ. ಅವುಗಳ ಮಧ್ಯೆ ನನ್ನ ಮತ್ತು ರುದ್ರಪ್ಪ ರವರ ಜಮೀನು ಇರುತ್ತದೆ. ರುದ್ರಪ್ಪ ರವರ ಸರ್ವೆ ನಂ 21 ಅದರ ವಿಸ್ತೀರ್ಣ 2 ಎಕರೆ ಚಿಲ್ಲರೆ ಇರುತ್ತದೆ.

ದಾವಾ ಆಸ್ತಿಯ ನಾಲ್ಕು ದಿಕ್ಕಿಗೆ ನಾನು ತಂತಿಕಂಬವನ್ನು ನೆಟ್ಟಿರುವುದಿಲ್ಲ. ಜಮೀನನ್ನು ಅಳತೆ ಮಾಡುವಾಗ ಅಳತೆ ಕಲ್ಲಿನಿಂದ ಪೂರ್ವ ದಿಂದ ಪಶ್ಚಿಮಕ್ಕೆ 2 ಎಕರೆ 5 ಗುಂಟೆ ಜಮೀನು ಇರುತ್ತದೆ. ಪಾಳು ಬಿದ್ದ ಜಮೀನನ್ನು ಭೂಮಾಪಕರು ಅಳತೆ ಮಾಡುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಯಾವ ದಿಕ್ಕಿಗೆ ರುದ್ರಪ್ಪನವರ ಆಸ್ತಿ ಬರುತ್ತದೆ ಎಂಬ ಪ್ರಶ್ನೆಗೆ ಉತ್ತರಕ್ಕೆ ಬರುತ್ತದೆ ಎಂದು ನುಡಿಯುತ್ತಾರೆ. ರುದ್ರಪ್ಪ ರವರ ತಂದೆ ಹೆಸರು ಸಿದ್ರಾಮಪ್ಪ. ರುದ್ರಪ್ಪನವರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ರುದ್ರಪ್ಪ ಬಿನ್ ಸಿದ್ರಾಮಪ್ಪ ರವರು ಅವರ ಜಮೀನನ್ನು ಬೇಸಾಯ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳ ಮೇಲೆ ನನಗೆ ದ್ವೇಷ ಇರುವುದರಿಂದ ಅವರು ಯಾವುದೇ ತೊಂದರೆ ನೀಡದಿದ್ದರೂ ಸಹ ಅವರ ವಿರುದ್ದ ಈ ಪ್ರಕರಣ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಸ್ವಾದೀನಕ್ಕೆ ಭಂಗ ಪಡಿಸಿರುವುದಿಲ್ಲ ಮತ್ತು ನಮ್ಮ ಜಮೀನನ್ನು

ಉಳುಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ರುದ್ರಪ್ಪ ಬಿನ್ ಸಿದ್ರಾಮಪ್ಪರವರೊಂದಿಗೆ ನಾನು ವಿಶ್ವಾಸದಿಂದ ಇರುತ್ತೇನೆ ಎಂದರೆ ಸರಿ. ದಾವೆಯಲ್ಲಿ ಕೇಳಿದ ಪರಿಹಾರವನ್ನು ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.